ಅಧ್ಯಕ್ಷರು :- ಇಲ್ಲ, ಹಾಗೇನಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೆಲ್ಲಾ ತಿಳಿದುಕೊಳ್ಳಬಾರದು.

2. **ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು :**

ಅ) ವಿಷಯ :- ಸುವರ್ಣ ಸೌಧ ಕಟ್ಟಡ ನಿರ್ಮಾಣಕ್ಕೆ ಅಡಿಗಲ್ಲು ಸಮಾರಂಭಕ್ಕೆ ದಿನಾಂಕ ನಿಗದಿಯಾಗಿದ್ದರೂ ತರಾತುರಿಯಲ್ಲಿ ಪೂಜೆ ಮಾಡಿರುವ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದು ಕುಸ್ತಿಯಾಡುವ ಅಖಾಡವೇನಲ್ಲ. ಕುಸ್ತಿ ಆಡಿದರೆ atleast ಅವರವರ ಶಕ್ತಿಯನ್ನು physically ತೋರಿಸುತ್ತಾರೆ. ಆದರೆ, ಪ್ರಜಾಪ್ರಭುತ್ವದಲ್ಲಿ ನಾವು ನಮ್ಮ ಸಮಸ್ಯೆಗಳನ್ನು ಚರ್ಚೆಯಿಂದಲೇ ಬಗೆಹರಿಸಿಕೊಳ್ಳಬೇಕು. ಮತ್ತು ಚರ್ಚೆಗೆ ಮಹತ್ವ ಬರಬೇಕು. ಇಲ್ಲೊಂದು ಸುವರ್ಣ ಸೌಧ ನಿರ್ಮಿಸುತ್ತಿದ್ದು, ಮುಂದಿನ ವರ್ಷ ಅಲ್ಲಿಯೇ ಅಧಿವೇಶನ ನಡೆಸಬೇಕೆಂದು ತಾವು ತೀರ್ಮಾನಿಸಿದ್ದೀರಿ. ಆದರೆ, ಸಮಾರಂಭ ನಾಳೆ ಎಂದು ನಮಗೆ ಹೇಳಿ ನಾಳೆ ದಿವಸ ಚೆನ್ನಾಗಿಲ್ಲವೆಂದು ತರಾತುರಿಯಲ್ಲಿ ಇವತ್ತೇ ನೀವು, ಮುಖ್ಯಮಂತ್ರಿಗಳು ಮತ್ತು ಸಭಾಪತಿಯವರಾದ ವೀರಣ್ಣ ಮತ್ತಿಕಟ್ಟಿಯವರು ಹೋಗಿ. .

ಅಧ್ಯಕ್ಷರು :- ನಾವೇನೂ ಹೋಗಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವು ಹೋಗಿರುವುದಕ್ಕೆ ನಾನು ಹೇಳುತ್ತಿಲ್ಲ. ನಮ್ಮ ಮಾತುಗಳನ್ನು ಹೇಳುವುದಕ್ಕೂ ಸಾಕಷ್ಟು ಅವಕಾಶವಿದೆ. ಅದಕ್ಕೋಸ್ಕರ, ಇವತ್ತೇ important ಎಂದು ತಿಳಿದು ಅಲ್ಲಿಗೆ ಹೋಗಿ ಪೂಜೆ ಮಾಡಿ, ಅಡಿಗಲ್ಲು ಹಾಕಿ ನಾಳೆ ಸಮಾರಂಭ ಮಾಡುತ್ತೀರಾ? ಇದು ನಮ್ಮೆಲ್ಲರಿಗೂ ನಾಚಿಕೆಯಾಗುತ್ತದೆ. ನಾವು ಪ್ರಜಾಪ್ರಭುತ್ವದಲ್ಲಿದ್ದೇವೆಯೇ? ಅಥವಾ ಬೇರೆ ಯಾವುದಾದರೂ ಪದ್ಧತಿಯನ್ನು ಅನುಸರಿಸುತ್ತಿದ್ದೇವೆಯೇ? precedents, customs, usages ಅಥವಾ ಪ್ರಜಾಪ್ರಭುತ್ವದಲ್ಲಿರುವ rules and regulationsಗೆ ಬೆಲೆ ಇದೆಯೇ? ಇಲ್ಲವೇ? ನಿಜವಾಗಿಯೂ ಇದು ನಮಗೆಲ್ಲರಿಗೂ ನಾಚಿಕೆ ತರುವಂಥಾದ್ದಾಗಿದೆ.

ಶ್ರೀ ಆರ್. ರೋಷನ್ ಬೇಗ್ :- ಸಭಾಧ್ಯಕ್ಷರಿಗೆ ಅವಮಾನ ಮಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರೂ ಹೋಗಿಲ್ಲ, ಸಭಾಧ್ಯಕ್ಷರಾದ ತಮಗೂ ಆಹ್ವಾನವಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ :- ಒಂದು ಸಲ foundation ಹಾಕಿರುವುದಕ್ಕೆ ಮತ್ತೊಮ್ಮೆ foundation ಹಾಕುವುದು ನಾಚಿಕೆಗೇಡಲ್ಲವೇ ಸ್ವಾಮಿ? ಒಂದು ಸಲ ಅಡಿಗಲ್ಲು ಹಾಕಿ estimateಗೆ ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಕೊಟ್ಟು foundation ಹಾಕಿರುವುದಕ್ಕೆ ನೀವು ಪುನ: ಅಡಿಗಲ್ಲು ಹಾಕುತ್ತಿದ್ದೀರಲ್ಲ, ನಿಮಗೆ ನಾಚಿಕೆಯಾಗುವುದಿಲ್ಲವೇ? ತಾವು ಯಾವ ಸಂಸ್ಕೃತಿ ಇಟ್ಟುಕೊಂಡಿದ್ದೀರಿ?

ಶ್ರೀ ಸಿ.ಎಂ. ಉದಾಸಿ :- ನಮಗೆ ಗೊತ್ತಿದೆ.

ಶ್ರೀ ಹೆಚ್.ಡಿ. ರೇವಣ್ಣ :- ನಾವು ನಿಮ್ಮ ಹತ್ತಿರವೇನೂ ಕಲಿಯು ಬೇಕಾಗಿಲ್ಲ.

ಶ್ರೀ ಸಿ.ಎಂ. ಉದಾಸಿ :- ನಿಮ್ಮ ಹತ್ತಿರವೂ ಕಲಿಯಬೇಕಾಗಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ:- ಒಂದು ಸಲ ಅಡಿಗಲ್ಲು ಹಾಕಿದ ಮೇಲೆ ಮತ್ತೆ ಅಡಿಗಲ್ಲು ಹಾಕುವ ಅಗತ್ಯತೆ ಏನಿತ್ತು? ದಯಮಾಡಿ ಹೇಳಿ. ಈಗ ಇನ್ನೊಂದು ಮೂರು ದಿನದಲ್ಲಿ ಈ ಸರ್ಕಾರ ಬಿದ್ದು ಹೋಗುತ್ತದ ಮತ್ತೊಮ್ಮೆ ಅಡಿಗಲ್ಲು ಹಾಕಿಸುತ್ತೀರಾ? ನಿಮ್ಮಿಂದ ನಾನು ಕಲಿಯಬೇಕಾಗಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಒಂದು ನಿಮಿಷ, ಆಮೇಲೆ ತಾವು ಉತ್ತರ ಹೇಳಿ. ಮಂತ್ರಿಗಳು ದಯವಿಟ್ಟು ಒಂದು ನಿಮಿಷ ಯಿಲ್ಡ್ ಆಗಬೇಕು.

ಶ್ರೀ ಹೆಚ್.ಡಿ. ರೇವಣ್ಣ :- ಒಂದು ಸಲ ಅಡಿಗಲ್ಲು ಹಾಕಿದ ಮೇಲೆ, ಯಾರು ಅಡಿಗಲ್ಲು ಹಾಕಿದ್ದಾರೆಂಬುದನ್ನು ತಾವು ತೆಗೆದು ನೋಡಿ.

ಶ್ರೀ ಸಿ.ಎಂ. ಉದಾಸಿ :- ನಾನು ನೋಡಿದ್ದೇನಪ್ಪ.

ಶ್ರೀ ಹೆಚ್. ಸಿ. ಬಾಲಕೃಷ್ಣ :- ಅಧ್ಯಕ್ಷರೆ, ಬೆಳಗಾವಿಯಲ್ಲಿ ಅಧಿವೇಶನ ಆಗಬೇಕಾದರೆ ಮುಖ್ಯವಾಗಿ ಕಾರಣಕರ್ತರು ನಮ್ಮ ನಾಯಕರಾದ ಕುಮಾರಸ್ವಾಮಿಯವರು. ಬೆಳಗಾವಿಯಲ್ಲಿ ಸುವರ್ಣ ಸೌಧದ ಕಟ್ಟಡ ಕಟ್ಟಬೇಕಾದರೂ ನಮ್ಮ ನಾಯಕರಾದ ಕುಮಾರಸ್ವಾಮಿಯವರು ಕಾರಣರಾಗಿದ್ದಾರೆ. ಆದರೆ, ಕನಿಷ್ಠ

ಸೌಜನ್ಯಕ್ಕಾದರೂ ಈ ಆಮಂತ್ರಣ ಪತ್ರಿಕೆಯಲ್ಲಿ ಅವರ ಹೆಸರು ಇಲ್ಲ. ಇದು ಭೂಮಿ ಪೂಜೆ, ಅಡಿಗಲ್ಲು ಸಮಾರಂಭವಲ್ಲ. ಇಲ್ಲಿ ಭೂಮಿ ಪೂಜೆಗೆ ಕುಮಾರಸ್ವಾಮಿಯವರನ್ನು ಕರೆಯುವ ಕನಿಷ್ಠ ಸೌಜನ್ಯವನ್ನೂ ಈ ಸರ್ಕಾರ ತೋರಿಸಲಿಲ್ಲವೆಂದರೆ, ಅಧ್ಯಕ್ಷರಾದ ತಾವೇನು ಹೇಳುತ್ತೀರಿ? ಕುಮಾರಸ್ವಾಮಿಯವರು ಮಾಡಿರುವ ಕೆಲಸಕ್ಕೆ ಅವರಿಗೆ ಆಹ್ವಾನ ಕೊಡುವುದಕ್ಕಾಗುವುದಿಲ್ಲ, ಅವರ ಹೆಸರನ್ನು ಆಮಂತ್ರಣ ಪತ್ರಿಕೆಯಲ್ಲಿ ಹಾಕುವುದಕ್ಕೆ ಆಗಲಿಲ್ಲವೆಂದರೆ, ಈ ಸರ್ಕಾರ ಯಾವ ರೀತಿ ನಡೆದುಕೊಳ್ಳುತ್ತದೆಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಕಾರಣಕರ್ತರು ಯಾರು? ಇದು ಒಳ್ಳೆಯ ಬೆಳವಣಿಗೆಯಲ್ಲ.

(ಗೊಂದಲ)

ಶ್ರೀ ಸಿ.ಎಂ. ಉದಾಸಿ :- ಮಾನ್ಯ ಸಭಾಧ್ಯಕ್ಷರೆ, ಮೊದಲು ಆಯ್ಕೆ ಮಾಡಿರುವ ಸ್ಥಳವನ್ನು ಬದಲಾವಣೆ ಮಾಡಿರುವ ವಿಚಾರ ಮಾನ್ಯ ಸದಸ್ಯರೆಲ್ಲರ ಗಮನಕ್ಕು ಬಂದಿದೆ. ಸ್ಥಳ ಬದಲಾವಣೆಯಾದ ಮೇಲೆ ಅಡಿಗಲ್ಲು ಸಮಾರಂಭ ಕಾರ್ಯಕ್ರಮವನ್ನು ನಾಳೆ ದಿವಸ ಇಟ್ಟುಕೊಂಡಿದ್ದೇವೆ. ಅದರನ್ವಯ ತಯಾರಿ ಯಾವ ರೀತಿ ಇದೆಯೆಂಬ ಬಗ್ಗೆ ಇವತ್ತು ನೋಡಲು ಹೋಗಿದ್ದೆವು. ಮುಹೂರ್ತದ ದೃಷ್ಟಿಯಿಂದ ಇಲಾಖಾಧಿಕಾರಿಗಳು ಅಲ್ಲಿ ಮುಹೂರ್ತದ ಕೆಲಸವನ್ನು ಮಾಡಿರಬೇಕೇ ಹೊರತು ಅಡಿಗಲ್ಲು ಸಮಾರಂಭದ ಕಾರ್ಯಕ್ರಮ ನಾಳೆ ದಿವಸ ನಡೆಯಲಿದೆ.

(ಗೊಂದಲ)

ಶ್ರೀ ಆರ್. ರೋಷನ್‌ಬೇಗ್ :- ಸಭಾಧ್ಯಕ್ಷರನ್ನು ಬಿಟ್ಟು ಹೋಗಿರುವ ಇವರಿಗೆ ಛೀಮಾರಿ ಹಾಕಬೇಕು. ಇದು ತೊಘಲಕ್ ದರ್ಬಾರಿನ ಸರ್ಕಾರ. ಸಭಾಧ್ಯಕ್ಷರನ್ನು, ವಿರೋಧ ಪಕ್ಷದ ನಾಯಕರನ್ನು ಕರೆದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ಹೊಸ ವಿಧಾನ ಸೌಧವನ್ನು ಮಾಡುತ್ತಾರೆ. ಆ ಸಭೆಯಲ್ಲಿ ನಾವು ಭಾಗವಹಿಸಬೇಕೆಂದು ಬಹಳ ಆಸೆ ಇಟ್ಟುಕೊಂಡಿದ್ದೆವು. ಇವತ್ತು ಮಹೂರ್ತ ಎಂದರೆ ಅದು ಯಾವ ಪಂಚಾಂಗದ್ದು? ಇವತ್ತು ಮುಹೂರ್ತ ನಾಳೆ reception! ಪ್ರಾರಂಭದಲ್ಲೆ ಈ ರೀತಿ ವಿಘ್ನವಾದರೆ ಇದನ್ನು ಪೂರ್ಣ ಮಾಡುತ್ತೀರೋ? ನಾಳೆ ಮಾಡುವುದನ್ನು ಇಂದು ಮಾಡಿ ಎಂದು ಯಾವ ಪಂಚಾಂಗದಲ್ಲಿ ಹೇಳಿದ್ದಾರೆ?

(ಗೊಂದಲ)

ಶ್ರೀ ಸಿ.ಎಂ. ಉದಾಸಿ :- ನಾಳೆಯೇ ಅಧಿಕೃತ ಕಾರ್ಯಕ್ರಮ ಇರುವುದು.

(ಗೊಂದಲ)

ಅಧ್ಯಕ್ಷರು :- ದಯಮಾಡಿ ಎಲ್ಲರು ಕುಳಿತುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ :- ನಾಳೆ ಮಾಡುವುದನ್ನು ಇವತ್ತು ಮಾಡಿದ್ದೀರಿ. ಅಲ್ಲಿ ಅಪಶಕುನವಾಗಿದ್ದರೆ ನಾಳೆ ಬಲಿಕೊಟ್ಟು ಮಾಡುತ್ತೀರಾ? ಇದೇನಿದು?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಸರ್ಕಾರ ಬದಲಾವಣೆಯಾದರೆ ಸ್ಥಳವೂ ಬದಲಾವಣೆಯಾಗುತ್ತದೆಯೆ? ಜಾಗ ಬದಲಾವಣೆಯಾಗುವುದರ ಜೊತೆಗೆ ಬಂದ ಬಂದ ಸರ್ಕಾರದವರೆಲ್ಲರು ಅಡಿಗಲ್ಲನ್ನು ಹಾಕಿದರೆ ಆಗುತ್ತದೆಯೆ?

(ಗೊಂದಲ)

ಶ್ರೀ ದೊಡ್ಡನಗೌಡ ಚಿಕ್ಕನಗೌಡ ಈಶ್ವರಗೌಡ :- ಇವರ ಸರ್ಕಾರ ವಿದ್ದಾಗ ಎಲ್ಲಾ ಇಲಾಖೆಯ ಅಧಿಕಾರ ಇವರ ಕೈಯಲ್ಲೇ ಇತ್ತು. ಆದರೆ ಅದು ನಮ್ಮ ಸರ್ಕಾರದಲ್ಲಿ ಇಲ್ಲ. ನಮ್ಮ ಸಚಿವರು ಅವರ ಖಾತೆಯನ್ನು ಮಾತ್ರ ನೋಡಿಕೊಳ್ಳುತ್ತಿದ್ದಾರೆ. ನೀವೇನು ಭಯಪಡಲು ಹೋಗಬೇಡಿ.

(ಗೊಂದಲ)

ಅಧ್ಯಕ್ಷರು :- ಚಿಕ್ಕನಗೌಡರೆ, ಪುಟ್ಟೇಗೌಡರೆ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ :- ಈ ರಾಜ್ಯದಲ್ಲಿ ಬಿ.ಜೆ.ಪಿ.ಗೆ 80 ಸೀಟು ಬಂದರೂ ಅಧಿಕಾರ ಮಡುವುದಕ್ಕೆ ಆಗಿರಲಿಲ್ಲ.

(ಗೊಂದಲ)

ವಿವೇಕಾನಂದರ ಹೆಸರಿನ ಮೇಲೆ ನೀವು ಬರಬೇಕೆ ಹೊರತು ನಿಮ್ಮ ಸ್ವಂತ ಶಕ್ತಿಯ ಮೇಲೆ ಬರುವುದಕ್ಕಾಗುವುದಿಲ್ಲ. ಪ್ರತಿ ಸರ್ಕಾರ ಬಂದಾಗ ಅವರಿಗೆ ಅಡಿಗಲ್ಲನ್ನು ಹಾಕಲು ಅವಕಾಶ ಕೊಡುತ್ತೀರಾ? ಒಂದೊಂದು ಸರ್ಕಾರ ಬಂದಾಗ ಒಂದೊಂದು ಸ್ಥಳವನ್ನು ಬದಲಾವಣೆ ಮಾಡಲು ಸಾಧ್ಯವಿದೆಯೆ?

ಇತ್ತೀಚೆಗೆ ದಂಡವತಿಯವರದ್ದು with out land acquition ಆಗಿಲ್ಲ. ಆದರೆ ಇವತ್ತು ಈಗಾಗಲೆ ಅಡಿಗಲ್ಲನ್ನು ಇಲ್ಲ ಹಾಕಿದ್ದೀರಿ. ಮುಂದೆ ಇನ್ನೊಂದು ಸರ್ಕಾರ ಬಂದಾಗ ಇನ್ನೊಂದು ಅಡಿಗಲ್ಲನ್ನು ಹಾಕಲು ಆಗುತ್ತದೆಯೆ? ನೀವು ಅಧಿಕಾರಿಗಳು ಹೇಳಿದಂತೆ ಕುಣಿಯಲು ಆಗುವುದಿಲ್ಲ. ಇವತ್ತು ಬೆಳಿಗ್ಗೆ ವಿರೋಧ ಪಕ್ಷದ ನಾಯಕರನ್ನೇ ಕರೆದುಕೊಂಡು ಹೋಗದೆ ಆ ಕೆಲಸ ಮಾಡಿದ್ದೀರಿ. ಅವರನ್ನು ಸ್ಥಳ ಪರಿಶೀಲನೆಗೆ ಕರೆದುಕೊಂಡು ಹೋಗಬೇಕಾಗಿತ್ತು. ನಿಮ್ಮ ಪಂಚಾಂಗ ಇದೆ ಎಂದರು, ವಿರೋಧ ಪಕ್ಷದ ನಾಯಕರಿಗೆ ಬೆಳಿಗ್ಗೆ ಒಂದು Phone ಮಾಡಿ ಹೇಳಿದ್ದರೆ ಬರುತ್ತಿದ್ದರು.

ಶ್ರೀ ರಾಮಚಂದ್ರಗೌಡ :- ರೇವಣ್ಣನವರದ್ದು ಮತ್ತು ನಮ್ಮದು ಎಲ್ಲಾ ಒಂದೇ ಪಂಚಾಂಗ. ಕಳೆದ ಸಲ ಪೂಜೆ ಮಾಡುವಾಗ ಮುಖ್ಯಮಂತ್ರಿಯವರು ಒಂದು ಗಂಟೆ ತಡವಾಗಿ ಬಂದಿದ್ದರಿಂದ ಅಧಿಕಾರಿಗಳೇ ಪೂಜೆ ಮಾಡಿದರು.

ಶ್ರೀ ಹೆಚ್.ಡಿ. ರೇವಣ್ಣ :- ನನ್ನ ಜೀವನದಲ್ಲಿ ಇದರಲ್ಲಿ ರಾಜಕೀಯವನ್ನು ಮಾಡಿಲ್ಲ.

ಅಧ್ಯಕ್ಷರು :- ನೀವುಗಳು ಈ ರೀತಿ ಪರಸ್ಪರ ಮಾತನಾಡಬೇಡಿ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ರಾಮಚಂದ್ರಗೌಡ :- ಕಳೆದ ಸಲ ಪೂಜೆ ಮಾಡುವಾಗ ಮುಖ್ಯಮಂತ್ರಿಯವರು ಒಂದು ಗಂಟೆ ತಡವಾಗಿ ಹೋಗಿದ್ದ ಕಾರಣ ಅಧಿಕಾರಿಗಳೆ ಪೂಜೆ ಮಾಡಿದರು. ಈಗ ನಾವು ಕಟ್ಟಬೇಕೆಂದು ಆಯ್ಕೆ ಮಾಡಿರುವ ಜಾಗವು ಸರಿಯಾಗಿಲ್ಲವೆಂದು ಹೇಳಿ ಬೇರೆ ಜಾಗವನ್ನು ಆಯ್ಕೆ ಮಾಡಿ ನಾಳೆ ಪೂಜೆಯನ್ನು ಇಟ್ಟುಕೊಂಡಿದ್ದೇವೆ. ನಾಳೆ ಪೂಜೆ ಇಟ್ಟುಕೊಳ್ಳಲು ಇವತ್ತು ಅಲ್ಲಿಗೆ ಟೆಂಟನ್ನು ಹಾಕಲು ಹೋಗಿ ಆ ಟೆಂಟ್ ಗೆ ಪೂಜೆ ಮಾಡಿದ್ದನ್ನೆ ಅದಕ್ಕೇ ಪೂಜೆ ಮಾಡಿದರು ಎಂದುಕೊಂಡರೆ ನಾವು ಏನು ಮಾಡಲು ಆಗುತ್ತದೆ.

ಶ್ರೀ ಆರ್. ರೋಷನ್‌ಬೇಗ್ :- ಇದು ತೊಘಲಕ್ ದರ್ಬಾರ್, ಇದು ಎಂಥ ಜೋಕ್! ಇವರಿಗೆ ನಾಚಿಕೆಯಾಗಬೇಕು. ಟೆಂಟಿಗೆ ಪೂಜೆಯಂತೆ!

ಶ್ರೀ ರಾಮಚಂದ್ರಗೌಡ :- ಟೆಂಟ್ ಹಾಕಬೇಕಾದರೂ ಪೂಜೆ ಮಾಡಬೇಕು.

(ಗೊಂದಲ)

ಅಧ್ಯಕ್ಷರು :- ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಮಾನ್ಯ ಅಧ್ಯಕ್ಷರೆ, ಸರ್ಕಾರದ ಒಂದು ಜವಾಬ್ದಾರಿ..

ಅಧ್ಯಕ್ಷರು :- ಈ ವಿಚಾರವಾಗಿ ಸಾಕು. ಎಲ್ಲರು ಕುಳಿತುಕೊಳ್ಳು.

ಶ್ರೀ ಕೆ.ಎಂ. ಶಿವಲಿಂಗೇಗೌಡ :- ಸದಸ್ಯರದ್ದನ್ನು ಸಹ ಸ್ವಲ್ಪ ಗಮನಕ್ಕೆ ತೆಗೆದುಕೊಳ್ಳಿ ಸ್ವಾಮಿ.

ಅಧ್ಯಕ್ಷರು :- ಈ ರೀತಿ ಮಾತನಾಡಬೇಡಿ ಶಿವಲಿಂಗೇಗೌಡರೆ. ತಾವು ಇಷ್ಟೊಂದು ಹಗುರವಾಗಿ ಮಾತನಾಡಬೇಡಿ. ಏನಾದರು ವಿಷಯ ಮಾತನಾಡುವುದಾದರೆ ಹೇಳಿ. ಅದನ್ನು ಬಿಟ್ಟು ನಮಗೆ ಮಾತನಾಡಲು ಬಿಡುವುದಿಲ್ಲವೆಂದು ಹೇಳುವುದು ಸರಿಯಲ್ಲ. ನನಗೆ ತಿಳಿದಂತೆ ನಿಮಗೆ ಯಾವಾಗ ಅವಕಾಶ ಕೊಡಬೇಕೊ ಆಗ ಕೊಟ್ಟೇ ಇದ್ದೇನೆ. ಆ ರೀತಿ ಕೊಟ್ಟಿದ್ದರು ಮತ್ತೆ ತೊಂದರೆ ಕೊಡುವುದು. ನಿಮ್ಮ ಈ behavior ಸರಿಯಲ್ಲ. ನೀವು ಈ ರೀತಿ ಮಾಡುವುದು ಸರಿಯಲ್ಲ. ಮೊದಲು ಸರಿಯಾಗಿ ಮಾತನಾಡುವುದನ್ನು ಕಲಿಯಿರಿ. ಬೇಕಾದರೆ ಅನುಮತಿ ತೆಗೆದುಕೊಂಡು ಮಾತನಾಡಿ.

ಶ್ರೀ ಸುಭಾಷ್ ಎ. ಗುತ್ತೇದಾರ್ :- ಇದು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ಸುವರ್ಣಸೌಧ ಕಟ್ಟಡದ ಗುದ್ದಲಿ ಪೂಜೆ. ಅಲ್ಲಿ ನಮ್ಮ ಶಾಸಕರ ಹೆಸರೇ ಇಲ್ಲ. ಕೇವಲ ಲೋಕಲ್ ಎಂಎಲ್ಎ ಹೆಸರನ್ನು ಮಾತ್ರ ಹಾಕಿದ್ದಾರೆ. ಎಲ್ಲಾ ಶಾಸಕರು, ಎಲ್ಲಾ ವಿರೋಧ ಪಕ್ಷದ ಸದಸ್ಯರ ಹೆಸರು ಇಲ್ಲಿ ಬರಬೇಕಾಗಿತ್ತು.

ಶ್ರೀ ಸಿ.ಎಂ. ಉದಾಸಿ :- ಎಲ್ಲರಿಗೂ ಆಮಂತ್ರಣ ಕಳುಹಿಸಲಾಗಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :- ಇದನ್ನು ಸ್ವಲ್ಪ ಗಂಭೀರವಾಗಿ ತೆಗೆದುಕೊಳ್ಳಬೇಕು. ಇಂಥ ಅನಿಷ್ಟ ಪದ್ಧತಿಗಳು ಮತ್ತು ಕುರುಡು ನಂಬಿಕೆಗಳು ಒಂದು ಸರ್ಕಾರದಲ್ಲಿ ಬಂದರೆ ಕಷ್ಟವಾಗುತ್ತದೆ. ನೀವು ನಿಮ್ಮ ಮನೆಯಲ್ಲಿ ಪೂಜೆ, ಪುರಸ್ಕಾರ, ಹೋಮವನ್ನು ಬೇಕಾದರೆ ಹತ್ತತ್ತು ಸಲ ಮಾಡಿ. ರೇವಣ್ಣನವರು ಹೇಗೆ ಅವರ ಮನೆಯಲ್ಲಿ ಮಾಡಿಕೊಳ್ಳುತ್ತಾರೊ ಆ ರೀತಿ ನೀವೂ ಮಾಡಿಕೊಳ್ಳಿ! ನಾವು ಬೇಡ ಎನ್ನುವುದಿಲ್ಲ.

ಅಧ್ಯಕ್ಷರು :- ಅದು ರೇವಣ್ಣನವರಿಗೆ ಕೇಳಿಸಲಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :- ಅವರಿಗೆ ಕೇಳಿಸಿದೆ. ನಾನು ಹೋಮ ಹವನ, ಯಜ್ಞ ಸರ್ಕಾರದಲ್ಲಿ ಮಾಡುವುದು ಬೇಡವೆಂದು ಹೇಳಿದೆ.

ಶ್ರೀ ರಾಮಚಂದ್ರಗೌಡ :- ಅವರು ಪ್ರತಿಯೊಂದು ನಿಮಿಷವನ್ನು ಸಹ ಇದನ್ನು ನೋಡಿಯೇ ಮಾಡುವುದು!

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ಅವರನ್ನು ನೋಡಿಯೇ ತಾವು ಇಲ್ಲಿ ಅದನ್ನು ತಂದಿದ್ದೀರಿ!

ಶ್ರೀ ಹೆಚ್.ಡಿ. ರೇವಣ್ಣ :- ಬೇಕಾದರೆ ರಾಮಚಂದ್ರಗೌಡರಿಗು ಅದನ್ನು ಹೇಗೆ ಮಾಡಬೇಕೆಂದು ಹೇಳಿಕೊಡುತ್ತೇನೆ ಬರಲು ಹೇಳಿ!

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ನಾನು ಏಕೆ ಇದನ್ನು ಪ್ರಸ್ತಾಪ ಮಾಡಿದೆಯೆಂದರೆ, ಅವರ ದೃಷ್ಟಿಯಲ್ಲಿ ಈ ವಿಚಾರ ಕ್ಷುಲ್ಲಕವಿರಬಹುದು. ಈ ಸದನದ ಘನತೆ, ಗೌರವವನ್ನು ಎತ್ತಿಹಿಡಿಯತಕ್ಕವರು ತಾವು. ವಿಧಾನ ಸಭೆ ಕಟ್ಟಡ ಈ ಭಾಗದಲ್ಲಿ ನಡೆದಾಗ ಅದಕ್ಕೆ ಅಧ್ಯಕ್ಷರು, ಮೇಲ್ಮನೆ ಅಧ್ಯಕ್ಷರು, ವಿರೋಧ ಪಕ್ಷದ ನಾಯಕರೂ ಇಲ್ಲ. ನೀವು ನಾಳೆ ಕಾರ್ಯಕ್ರಮವೆಂದು ಹೇಳಿ ಇವತ್ತೇ ಒಳ್ಳೆಯ ದಿವಸವೆಂದು ಪೂಜೆ ಪುರಸ್ಕಾರ ಮಾಡಿದರೆ ಇದು ಸಂವಿಧಾನಕ್ಕೆ ಅಪಚಾರ ಮಾಡಿದಂತಾಗುತ್ತದೆ.

ನಮ್ಮ ಸಂವಿಧಾನ ಇದು secular. ಇದು ಯಾವ ಧರ್ಮಾತೀತ ಅಲ್ಲ, ಇದು ಜಾತ್ಯಾತೀತ. ನೀವೆಲ್ಲರೂ ಕೂಡ ನಿಮ್ಮ ವೈಯಕ್ತಿಕ ವಿಚಾರಗಳನ್ನು, ವೈಯಕ್ತಿಕ ನಂಬಿಕೆಗಳನ್ನು ಅಥವಾ ವೈಯಕ್ತಿಕ ಮೂಢ ನಂಬಿಕೆಗಳನ್ನು ಇಟ್ಟುಕೊಂಡು, ಆ ರೀತಿಯಾಗಿ ಹೋದರೆ, ನಾಳೆ ಸರ್ಕಾರ ನಡೆಸುವಾಗಲೂ ಕೂಡ ಇದರ ಪರಿಣಾಮ ಸರ್ಕಾರ ಆಡಳಿತದ ಮೇಲೆ ಬೀಳುವುದರಲ್ಲಿ ಯಾವ ಸಂಶಯವೂ ಇಲ್ಲ. So, ನಿಮ್ಮ ನಡವಳಿಕೆಯಿಂದ ಆಡಳಿತದ ಮೇಲೂ ಕೂಡ ಪರಿಣಾಮ ಬೀರುತ್ತದೆ. ಅದಕ್ಕಾಗಿ ನೀವು ಹಿಂದೆ ನೋಡಿ. ಪಂಡಿತ್ ಜವಾಹರಲಾಲ್ ನೆಹರೂ ಅವರ ಕಾಲದಿಂದ ಹಿಡಿದುಕೊಂಡು ನೋಡಿದರೂ ಕೂಡ, ಎಂದೂ ಕೂಡ ಆಡಳಿತ ಮತ್ತು ಧರ್ಮ ಅಥವಾ ನಂಬಿಕೆಗಳು ಇವು ಯಾವುವೂ mix ಆಗಿರಲಿಲ್ಲ. ಆದರೆ ಇವತ್ತು ಏನಾಗಿದೆ ಎಂದರೆ, ನೀವು ದಿನ ಚೆನ್ನಾಗಿಲ್ಲ ಎನ್ನುತ್ತೀರಿ. ಅಂದರೆ ನಾಳೆ ಹುಟ್ಟುವಂತಹ

ಮಕ್ಕಳನ್ನೆಲ್ಲಾ ಕೊಂದು ಬಿಡುತ್ತೀರಾ? ಈ ದೇಶದಲ್ಲಿ ಪ್ರತಿ ಮೂರು ನಿಮಿಷಕ್ಕೊಮ್ಮೆ ಮಗು ಹುಟ್ಟುತ್ತದೆ. ಅಷ್ಟನ್ನೂ ನೀವು ಕೊಂದು ಬಿಡಿ. ಏಕೆಂದರೆ, ನಾಳೆ ದಿನ ಚೆನ್ನಾಗಿಲ್ಲ. ಈ ರೀತಿಯಾಗಿ ದಯವಿಟ್ಟು ಸರ್ಕಾರ ನಡೆಯಬಾರದು. ನಿಮ್ಮ ಧರ್ಮದ ಮೇಲೆ ವಿಶ್ವಾಸ ಇದ್ದರೆ, ನಿಮ್ಮನ ವಿಚಾರಗಳ ಮೇಲೆ ವಿಶ್ವಾಸವಿದ್ದರೆ, ಅದನ್ನು ನಿಮ್ಮ ಮನೆಯಲ್ಲಿ ಇಟ್ಟುಕೊಳ್ಳಿ, ನಿಮ್ಮ ಮನೆಯಲ್ಲಿ ಮಾಡಿ ಅಥವಾ ಯಾವುದಾದರೂ ನಿಮ್ಮ ಮದುವೆ ಮುಂಜಿಯಲ್ಲಿ ಮಾಡಿ. ಆದರೆ ಸರ್ಕಾರದ ಕೆಲಸದಲ್ಲಿ, ಸರ್ಕಾರದ ಕಛೇರಿಗಳಲ್ಲಿ, ಸರ್ಕಾರದ ಕಾರ್ಯಕ್ರಮಗಳಲ್ಲಿ ಇಂತಹ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು ಶುದ್ಧ ತಪ್ಪು. ಎರಡನೆಯದಾಗಿ, ನಿಮ್ಮನ್ನೂ ಕಡೆಗಣಿಸಿ, ಮೇಲ್ಮನೆಯವರನ್ನೂ ಕಡೆಗಣಿಸಿ, ನಮ್ಮನ್ನೂ ಕಡೆಗಣಿಸಿದ್ದಾರೆ. ಇಲ್ಲಿ ಯಾವುದೇ protocol follow ಮಾಡಿಲ್ಲ. ಹಿಂದಿನ invitations ಬೇಕಾದರೆ ನೀವು ತೆಗೆದು ನೋಡಿ. ಇತ್ತೀಚೆಗೆ ಏನಾಗಿದೆ ಎಂದರೆ, ಯಾರು ಏನು ಹೇಳುತ್ತಾರೋ, protocol ಇರಲಿ ಬಿಡಲಿ, ಅದರ ಪ್ರಕಾರ ಹೋಗುತ್ತಿದ್ದಾರೆ. ಸುಮ್ಮನೆ ಹಾಕಿ ಸಾರ್, ತಾನೇ ಬರುತ್ತಾರೆ ಎನ್ನುವಂತಾಗಿದೆ. ನೀವು ಹೇಳಿದಂತೆ ಕೇಳಿಕೊಂಡು ಹೋಗುವುದಕ್ಕೆ ಬರಬೇಕೇ? ಇವತ್ತು ನಿಮ್ಮ ಸರ್ಕಾರ ಇರಬಹುದು, ನಾಳೆ ಇನ್ನೊಬ್ಬರದು ಬರಬಹುದು. ಯಾವ certain precedents ಅನ್ನು ನಾವು follow ಮಾಡುತ್ತೇವೋ, ಅದನ್ನು compete ಆಗಿ ನಾವು ಅನುಷ್ಠಾನದಲ್ಲಿ ತರಬೇಕಾಗುತ್ತದೆ. ಅದನ್ನು ಬಿಟ್ಟು, ಮನಸ್ಸಿಗೆ ಬಂದಂತೆ ನಡೆದುಕೊಂಡರೆ, ಅದು ಸರಿಯಲ್ಲ. ಮಾನ್ಯ ಅಧ್ಯಕ್ಷರೆ, ನೀವು ಸ್ವಲ್ಪ ಛೀಮಾರಿ ಹಾಕಬೇಕು. ನೀವು ಏಕೋ ನಗು ನಗುತ್ತಾ ಸ್ವಲ್ಪ ಅವರಿಗೆ support ಮಾಡುತ್ತಿದ್ದರೆ, ಅವರು ಏನು ತಿಳಿದುಕೊಂಡಿದ್ದಾರೆ ಎಂದರೆ,

ಅಧ್ಯಕ್ಷರು :- ನಾನು ಇಬ್ಬರಿಗೂ support ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅದಕ್ಕಾಗಿ ಧನ್ಯವಾದಗಳು. ಆದರೆ ಅವರಿಗ ಶಿಕ್ಷೆಯಾಗಬೇಕಾಗುತ್ತದೆ. ಅವರಿಗೆ ನೀವು ಇದಕ್ಕಾಗಿ support ಮಾಡಬಾರದು. ಕೆಟ್ಟ ಪದ್ಧತಿಗಳನ್ನು ಅಸ್ತಿತ್ವದಲ್ಲಿಟ್ಟು, ನಾನು ನಿಮಗೆ support ಮಾಡುತ್ತೇನೆಂದರೆ ಹೇಗೆ? ಇದು ಸರಿಯಲ್ಲ, ಇಂತಹ ಅನಿಷ್ಠ ಪದ್ಧತಿಗಳನ್ನು ಅನುಸರಣೆ ಮಾಡಬೇಡಿ, ಅದನ್ನು ನಿಮ್ಮ ಮನೆಯಲ್ಲಿ ಮಾಡಿಕೊಳ್ಳಿ, ಇದು ಸರ್ಕಾರದ ಕೆಲಸ, ಇದರಲ್ಲಿ ಆ ಆಚರಣೆ ಬೇಡ ಎಂದು ನೀವು ಸ್ವಲ್ಪ ಛೀಮಾರಿ ಹಾಕಿ.

ಶ್ರೀ ಡಿ.ಕೆ. ಶಿವಕುಮಾರ್ :- ಮಾನ್ಯ ಅಧ್ಯಕ್ಷರೆ, ಈಗ ತಾವು ಬಹಳ ದೊಡ್ಡ ಶುಭ ಮುಹೂರ್ತವನ್ನು ಹುಡುಕಿ, ಈ ವಿಧಾನ ಸಭೆ ಅಧಿವೇಶನ ಪ್ರಾರಂಭ ಮಾಡಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಅನೇಕ ಸಂಸ್ಕೃತಿ, ಮತ್ತೊಂದು ವಿಚಾರದಲ್ಲಿ ಈ ಸರ್ಕಾರ ಚಿಂತನೆ ಮಾಡುತ್ತಿರುತ್ತದೆ. ಇಲ್ಲಿ ಏನಾಗಿದೆ ಎಂದರೆ, ಈ ವಿಧಾನ ಸಭಾ ಅಧಿವೇಶನ ಪ್ರಾರಂಭವಾದಾಗಿನಿಂದ ಯಾವುದೂ ಒಳ್ಳೆಯ ದಾರಿಗೆ ಹೋಗುತ್ತಿಲ್ಲ. ಈ ರಾಜ್ಯಕ್ಕೂ ಒಂದು ಕಳಂಕ, ಈ ಭಾಗಕ್ಕೂ ಒಂದು ಕಳಂಕ. ತಮ್ಮ ಸರ್ಕಾರಕ್ಕೆ ಬಿಡಿ, ತಮಗೆ ಅದರ ಬಗ್ಗೆ ಚಿಂತೆಯಿಲ್ಲ. Governor's speech ಮಾಡಿಸಿದರಿ. ಆ Governor's speech ಬಗ್ಗೆ complete ಆಗಿ ಮಾಧ್ಯಮದವರೇ ಎಲ್ಲಾ ಬಿಡಿಸಿ, ಇದರಿಂದ ರಾಜ್ಯಕ್ಕೆ ಎಷ್ಟು ಲಾಭವಾಗಿದೆ? ಸರ್ಕಾರಕ್ಕೆ ಎಷ್ಟು ಲಾಭವಾಗಿದೆ? ತಮ್ಮ ಚಿಂತನೆ ಏನು ಎಂಬುದನ್ನು ತೋರಿಸಿದ್ದಾರೆ. ಆದರೆ ತಮ್ಮ ಪೀಠದ ಗೌರವದ ಬಗ್ಗೆ ನನಗೆ ದೊಡ್ಡ ಆತಂಕ ಉಂಟಾಗಿದೆ. ಏಕೆಂದರೆ, ವಿಧಾನ ಸಭೆ ನಡೆಸಲು ತಾವು ಇಲ್ಲಿ ತಮ್ಮ ನೇತೃತ್ವದಲ್ಲಿ ಈ ಹೊಸ ವಿಧಾನಸೌಧವನ್ನು ಕಟ್ಟಿಸಲಿಕ್ಕೆ ಪ್ರಾರಂಭ ಮಾಡಲು ಭೂಮಿ ಪೂಜೆ ಸಮಾರಂಭ ಮಾಡುತ್ತಿದ್ದೀರಿ. ಸರ್ಕಾರ ಬಿಡಿ, ಇವತ್ತು ಇರುತ್ತದೆ, ನಾಳೆ ಹೋಗುತ್ತದೆ. ಆದರೆ ಅವರಿಗೆ ಅವರದೇ ಆದಂತಹ ರಾಜಕೀಯ ಬದ್ಧತೆ ಮೇಲೆ, ಅವರು ಇದನ್ನು ತಮ್ಮ ಸ್ವಂತ self property ಮಾಡಿದಂತೆ ಮಾಡಿಕೊಂಡು, ಅವರು ಈ ಕಾರ್ಯಕ್ರಮವನ್ನು ಮಾಡಲಿಕ್ಕೆ...

ಶ್ರೀ ರಾಮಚಂದ್ರಗೌಡ :- Government is permanent. ಸರ್ಕಾರ ಇದ್ದೇ ಇರುತ್ತದೆ. ಆಡಳಿತ ನಡೆಸುವವರು ಇರಬಹುದು ಅಥವಾ ಹೋಗಿ ಬಹುದೇ ವಿನಃ ಸರ್ಕಾರವಂತೂ ಇದ್ದೇ ಇರುತ್ತದೆ. Government is continuous.

ಶ್ರೀ ಡಿ.ಕೆ. ಶಿವಕುಮಾರ್ :- ಆಯಿತು, it is continuous.

(ಗೊಂದಲ)

ಏಯ್, ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ನನ್ನ ಬಾಯಲ್ಲಿ ಎಲ್ಲಾ ಬರುವುದು ಬೇಡ, ಸುಮ್ಮನೆ ಕುಳಿತುಕೊಳ್ಳಪ್ಪ.

(ಗೊಂದಲ)

ಅಧ್ಯಕ್ಷರು :- ಇದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಬೇಗ ಇದನ್ನು ಮುಗಿಸಿಬಿಡೋಣ.

(ಗೊಂದಲ)

ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ಮಾನ್ಯ ಸಭಾಧ್ಯಕ್ಷರೆ, ಈ ವಿಷಯವನ್ನು close ಮಾಡಿ, ಬೇರೆ ವಿಚಾರ ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು :- Please, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :- ..... ಈ ನಾಡಿನಲ್ಲಿ ಏನೂ ಉದ್ಧಾರವಾಗಿಲ್ಲ. ನಾಡು, ನುಡಿ, ಧರ್ಮಗಳನ್ನು ಅರ್ಥ ಮಾಡಿಕೊಂಡು, ಅರ್ಥೈಸಿಕೊಂಡು, ಅರ್ಥಪೂರ್ಣವಾಗಿ ಸಂಸ್ಕೃತಿಯನ್ನು ಅಳವಡಿಸಿಕೊಳ್ಳತಕ್ಕದ್ದೇ ನಮ್ಮ ದೇಶದ, ನಮ್ಮ ರಾಜ್ಯದ ಕಟ್ಟು-ಕಟ್ಟಳೆ. ಇದನ್ನು ಮಾಡಲೇ ಬೇಕು. 'ಧರ್ಮೋ ರಕ್ಷಿತ ರಕ್ಷಿತಃ' ಯಾರು ಧರ್ಮವನ್ನು ರಕ್ಷಿಸುತ್ತಾರೋ, ಅವರನ್ನು ಧರ್ಮ ರಕ್ಷಿಸುತ್ತದೆ. ಯಾರೂ ಧರ್ಮವನ್ನು ಬಿಟ್ಟು ಹೋಗಬಾರದು.

(ಗೊಂದಲ)

ಅಧ್ಯಕ್ಷರು :- ಮಾನ್ಯ ಶಿವಕುಮಾರ್‌ರವರೆ, ಬೇಗ ಮುಗಿಸಿಬಿಡಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ :- ಮಾನ್ಯ ಅಧ್ಯಕ್ಷರೆ, ನಾನು ಮುಗಿಸುತ್ತಿದ್ದೆ. ಆದರೆ ಮಾನ್ಯ ರೇಣುಕಾಚಾರ್ಯರವರು ನಿಗಮವೊಂದರ Chairman ಆಗಿದ್ದಾರೆ. ಅವರು ನಮ್ಮನ್ನೆಲ್ಲಾ ಕೆಣಕುತ್ತಿದ್ದಾರೆ. ಅವರು ಆ ರೀತಿ ನಮ್ಮನ್ನು ಕೆಣಕಬಾರದು.

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ :- ನಾನು ಯಾರನ್ನೂ ಕೆಣಕುತ್ತಿಲ್ಲ. ಇರುವ ವಾಸ್ತವಾಂಶಗಳನ್ನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ :- ವಾಸ್ತವಾಂಶ ಬೇಡ. ನಾನು ಹೇಳುತ್ತೇನೆ ಕೇಳಿ. ನಾನು ಐದು ಸಾರಿ ಎಲೆಕ್ಟ್ ಆಗಿ ಈ ಸದನಕ್ಕೆ ಬಂದಿದ್ದೇನೆ. ನಾನು speaker ಗೆ ನನ್ನ ಹಕ್ಕನ್ನು ಪ್ರತಿಪಾದನೆ ಮಾಡುತ್ತಿದ್ದೇನೆ.

ಅಧ್ಯಕ್ಷರು :- ಆಯಿತು, ಅದನ್ನು ಬೇಗ ಮುಗಿಸಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ :- ಕುಳಿತುಕೊಳ್ಳುತ್ತೀಯೋ, ಇಲ್ಲವೋ? ಹೇಳಪ್ಪ.

(ಗೊಂದಲ)

ಅಧ್ಯಕ್ಷರು :- Please, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ :- ಮಾನ್ಯ ರೇಣುಕಾಚಾರ್ಯರವರು ರಾತ್ರಿ 12 ಗಂಟೆಗೆ ನನಗೆ ಫೋನ್ ಮಾಡಿದ್ದರು. ಅದೆಲ್ಲದರ ಬಗ್ಗೆ ನಾನು ಇಲ್ಲಿ ಏಾತನಾಡುವುದು ಬೇಡ.

ಅಧ್ಯಕ್ಷರು :- ಆಯಿತು ಮಾತನಾಡಬೇಡಿ. ಬೇಗ ಮಾತನಾಡಿ ಮುಗಿಸಿ. ವಿಷಯ ಬೇರೆ ಕಡೆಗೆ ಹೋಗುವುದು ಬೇಡ. Agenda ದಲ್ಲಿ ಇನ್ನೂ ಚರ್ಚಿಸಬೇಕಾಗಿರುವ ಸಾಕಷ್ಟು ಗಂಭೀರ ವಿಷಯಗಳಿವೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಶಿವಕುಮಾರ್‌ರವರೆ, ಆದಷ್ಟು ಬೇಗ ಮುಗಿಸಿಬಿಡಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಕುಮಾರ್‌ರವರು ಮಾನ್ಯ ರೇಣುಕಾಚಾರ್ಯರವರು ರಾತ್ರಿ 12 ಗಂಟೆಗೆ ನನಗೆ ಫೋನ್ ಮಾಡಿದ್ದರು ಎಂದು ಹೇಳಿದರು. ಅವರು ಯಾವ ವಿಚಾರದಲ್ಲಿ ಫೋನ್ ಮಾಡಿದ್ದರು? ಎಂಬುದನ್ನು ದಯಮಾಡಿ ಅವರು ಈ ಸಭೆಗೆ ತಿಳಿಸಬೇಕು.

(ಗೊಂದಲ)

ಅಧ್ಯಕ್ಷರು :- ಅದು ಅವರವರ ವಿಷಯ. ಅದಕ್ಕೆ ನೀವು ಏಕೆ ಚಿಂತೆ ಮಾಡುತ್ತೀರಿ?

(ಗೊಂದಲ)

Please, ಮಾನ್ಯ ಬಾಲಕೃಷ್ಣರವರೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಬೇಗ ಮುಗಿಸಿಬಿಡಿ. ಇಲ್ಲದಿದ್ದರೆ ನಾನು next subjectಗೆ ಹೋಗುತ್ತೇನೆ.

(ಗೊಂದಲ)

ಶ್ರೀ ವಿ. ಸೋಮಣ್ಣ :- ಮಾನ್ಯ ಅಧ್ಯಕ್ಷರೆ, I am on a point of order.

ಅಧ್ಯಕ್ಷರು :- ಇದರಲ್ಲಿ ಯಾವ point of order?

ಶ್ರೀ ವಿ. ಸೋಮಣ್ಣ :- ದಯವಿಟ್ಟು ರೂಲ್ 324ನ್ನು ನೋಡಬೇಕು. ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಿದ್ದಾರೆ. ಈ ಅಧಿವೇಶನದ ಒಂದು ಗಾಂಭೀರ್ಯವನ್ನು ಅರ್ಥಮಾಡಿಕೊಳ್ಳದೆ, ಬೇರೆ ವಿಚಾರಕ್ಕೆ time waste ಮಾಡಲಾಗುತ್ತಿದೆ. ಇದನ್ನು ನೋಡಿಕೊಂಡು ಬಾಕಿಯವರು ಸುಮ್ಮನೆ ಕುಳಿತುಕೊಂಡಿರಬೇಕೇ? ತಾವು ಹೇಳಿದವರು ಮಾತನಾಡಬೇಕಾದರೆ, ಬೇರೆ ಎಲ್ಲರೂ ಕುಳಿತುಕೊಂಡು ಮಾತನಾಡುತ್ತಿರುವುದನ್ನು ಕೇಳಬೇಕಲ್ಲವೇ?

ಅಧ್ಯಕ್ಷರು :- ಮಾನ್ಯ ಸೋಮಣ್ಣನವರೆ, ಇದು ಎಲ್ಲಾ ಸದಸ್ಯರಿಗೂ apply ಆಗುತ್ತದೆ. ಮಾನ್ಯ ಸದಸ್ಯರು ತಮ್ಮನ್ನು ತಾವೇ ನಿಯಂತ್ರಿಸಿಕೊಳ್ಳಬೇಕು.

ಶ್ರೀ ವಿ. ಸೋಮಣ್ಣ :- ಎಲ್ಲರೂ ಇದನ್ನು ಅರ್ಥಮಾಡಿಕೊಳ್ಳಬೇಕು.

ಅಧ್ಯಕ್ಷರು :- ಹೌದು, ಎಲ್ಲರೂ ಇದನ್ನು ಅರ್ಥಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ :- ಈ ವಿಧಾನ ಸಭೆಯನ್ನು ಇಡೀ ಎಲ್ಲಾ ಶಾಸಕರು ತಮ್ಮ ಕೈಗೆ ಕೊಟ್ಟಿದ್ದೇವೆ. ಇದರ ಘನತೆ-ಗೌರವಗಳನ್ನು ಕಾಪಾಡಿಕೊಳ್ಳಬೇಕಾದದು ತಮ್ಮ ಕರ್ತವ್ಯವಾಗಿದೆ.

ಎಲ್ಲಾ ಸಂದರ್ಭದಲ್ಲೂ ವಿರೋಧಪಕ್ಷವನ್ನು ಕಾಪಾಡಿದ್ದೀರಿ, ಸರ್ಕಾರವನ್ನು ಕಾಪಾಡಿದ್ದೀರಿ, ಸರ್ಕಾರ ತಪ್ಪು ಮಾಡಿದಾಗ ಮಾರ್ಗದರ್ಶನವನ್ನು ಕೊಟ್ಟಿದ್ದೀರಿ. ಇವತ್ತು ಏನು ಹೊಸ ವಿಧಾನಮಂಡಲದ ಅಧಿವೇಶನ ಈ ಭಾಗದಲ್ಲಿ ಆರಂಭವಾಗಿದೆ, ಇದಕ್ಕೆ ನಾವೆಲ್ಲಾ ಸಹಕಾರವನ್ನು ಕೊಟ್ಟು ಒಳ್ಳೆಯದಾಗಲೆಂದು ಇಲ್ಲಿಗೆ ಬಂದಿದ್ದೇವೆ. ಈ ವಿಧಾನ ಸೌಧದಲ್ಲಿ ರಾಜಕಾರಣ ಮಾಡುವುದು ಬೇಡ, ಈ ಸಂವಿಧಾನದ ವ್ಯವಸ್ಥೆಯಲ್ಲಿ ಮಾಡಬಾರದು ಎಂದು ತಾವು ಹಿಂದೆಯು ಕೂಡ ಒಂದು ಸಭೆಯನ್ನು ನಡೆಸಬೇಕಾದರೆ ಹೇಳಿದಿರಿ. ಈ ಭಾಗಕ್ಕೆ ಹೆಚ್ಚಿನ ಮಹತ್ವ ಕೊಡಬೇಕೆಂದು ನಾವೆಲ್ಲಾ ಇಲ್ಲಿಗೆ ಬಂದಿದ್ದೇವೆ. 22ನೇ ತಾರೀಖು ಸುವರ್ಣಸೌಧಕ್ಕೆ ಭೂಮಿ ಪೂಜೆ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅಧ್ಯಕ್ಷರೆ, ತಮ್ಮ ಸ್ಥಾನ ಬಹಳ ದೊಡ್ಡದು. ಇಲ್ಲಿ ಬಹಳ ದೊಡ್ಡ ದೊಡ್ಡ ಜನರೆಲ್ಲ ಕುಳಿತಿದ್ದಾರೆ. ನಾನು ವೈಯಕ್ತಿಕವಾಗಿ ಹೇಳುವುದಾದರೆ ತಾವು ಅಲ್ಲಿ ಕುಳಿತುಕೊಳ್ಳಬಾರದಾಗಿತ್ತು, ಇಲ್ಲಿ ತಾವು ಎರಡನೆಯವರೊ, ಮೂರನೆಯವರೊ ಆಗಿ ಕುಳಿತುಕೊಳ್ಳುತ್ತಿದ್ದಿರಿ. ನನ್ನ ಸಲಹೆ, ಸ್ವಾಮಿ, ನನಗೆ ತಮ್ಮ ಘನತೆ ಹಾಳಾಗಬಾರದು. ಈ ಸ್ಥಾನದಲ್ಲಿ ಕುಳಿತವರೆಲ್ಲಾ ವಾಪಸ್ ಚುನಾವಣೆಯಲ್ಲಿ ಗೆದ್ದು ಬರಬೇಕು. ಏಕೆಂದರೆ, ಇಲ್ಲಿ ನಾಗರತ್ನಮ್ಮನವರು ಕುಳಿತಿದ್ದರು, ವೆಂಕಟರಮಣಪ್ಪನವರು ಕುಳಿತಿದ್ದರು, ಕೆ.ಆರ್.ಪೇಟೆ ಎಸ್.ಎಂ. ಕೃಷ್ಣರವರು ಕುಳಿತಿದ್ದರು. ಇವರೆಲ್ಲಾ ಕುಳಿತು ವಾಪಸ್ ಹೋಗಿ ಬಿಟ್ಟರು.

ಅಧ್ಯಕ್ಷರು :- ಶಿವಕುಮಾರ್ ಅವರೆ, ನನ್ನ ಬಗ್ಗೆ ಯಾರೂ ಕಾಳಜಿ ತೆಗೆದುಕೊಳ್ಳುವುದು ಬೇಡ, ನನ್ನ ಬಗ್ಗೆ ನಾನೇ ಕಾಳಜಿಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ :- ನಮಗೆ ಬೇಕು, ನಾಳೆಯ ದಿವಸಕ್ಕೆ ಏನು ಆಹ್ವಾನ ಪತ್ರಿಕೆಯನ್ನು ಮಾಡಿದ್ದಾರೆ, ಇಲ್ಲವೆಂದರೆ ಅವರ ಕೈಯಲ್ಲೇ ಮಾಡಿಸಿಕೊಡಿ. ವಿರೋಧಪಕ್ಷದವರನ್ನು ಜೊತೆಯಲ್ಲಿ ಇಟ್ಟುಕೊಂಡು, ಯಾವ ಸದನದ ನಾಯಕರನ್ನು ಗಮನಕ್ಕೆ ಇಟ್ಟುಕೊಳ್ಳದೆ ಮಾಡಲಾಗಿದೆ. ಇದು ಬೆಳಗಾಂ ಜಿಲ್ಲೆ ಶಾಸಕರ ವಿಧಾನ ಸಭೆಯಲ್ಲ, ಬೆಳಗಾಂ ಜಿಲ್ಲೆ ಶಾಸಕರ ವಿಧಾನ ಸೌಧವಲ್ಲ. ಇಲ್ಲಿರುವ ಎಲ್ಲಾ 224

ಸದಸ್ಯರ ಮತ್ತು ಮೇಲ್ಮನೆಯ ಸದಸ್ಯರ ವಿಧಾನ ಸೌಧವಿದು. ಇಲ್ಲಿ ನೀವು ಬರಿ ಬೆಳಗಾಂ ಜಿಲ್ಲೆಯ ಶಾಸಕರನ್ನು ಹಾಕಿಕೊಂಡು, ಅದು ವಿರೋಧ ಪಕ್ಷದ ನಾಯಕರಿಗೆ ಪ್ರೊಟೊಕಾಲ್ ಪ್ರಕಾರ ಗೌರವವಿಲ್ಲದೆ ಆಹ್ವಾನ ಪತ್ರಿಕೆಯಲ್ಲಿ ಕೆಳಗೆ ಅವರ ಹೆಸರುಗಳನ್ನು ಹಾಕಿ ಈ ರೀತಿ ಆಹ್ವಾನ ಪತ್ರಿಕೆಯನ್ನು ಸಿದ್ದಪಡಿಸಲಾಗಿದೆ, ಇದನ್ನು ತಾವು ತಿರಸ್ಕಾರ ಮಾಡಬೇಕು, ವಜಾ ಮಾಡಬೇಕು. ನಾವು, ಕಾಂಗ್ರೆಸ್ ಪಕ್ಷದ ಪರವಾಗಿ ಇದಕ್ಕೆ ಸಹಕಾರವನ್ನು ಕೊಡುವುದಕ್ಕೆ ಸಿದ್ದವಿಲ್ಲ, ಇದನ್ನು ನೀವೇನಾದರು ಮುಂದುವರೆಸುವುದಾದರೆ, ಕಾಂಗ್ರೆಸ್ ಪಕ್ಷದ ಸದಸ್ಯರು ಪ್ರತಿಭಟನೆ ಮಾಡಿ, ಬಹಿಷ್ಕಾರ ಮಾಡುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಏಕೆಂದರೆ, ಈಗ ನಾವು ಸರ್ಕಾರಕ್ಕೆ ಹೇಳುವ ಶಕ್ತಿಯನ್ನು ಕಳೆದುಕೊಂಡಿದ್ದೇವೆ. ರಾಮಚಂದ್ರಗೌಡರು ಟೆಂಟ್ ಹಾಕುವುದಕ್ಕೆ ನಾವು ಪೂಜೆ ಮಾಡುತ್ತೇವೆಂದು ಹೇಳುವುದಾದರೆ, ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇದೇನಿದು ಸ್ವಾಮಿ? ಟೆಂಟ್ ಹಾಕುವುದಕ್ಕೆ ಪೂಜೆ, ಪ್ಯಾಂಟ್ ಹಾಕುವುದಕ್ಕೆ ಪೂಜೆ, ಚೆಡ್ಡಿ ಹಾಕಿಕೊಳ್ಳುವುದಕ್ಕೆ ಪೂಜೆ ಎಂದರೆ ಹೇಗೆ, ನಮ್ಮ ನಮ್ಮ ಮನೆಗಳಲ್ಲಿ ನಮ್ಮ ಆಚಾರವಿಚಾರಗಳನ್ನು ಇಟ್ಟುಕೊಳ್ಳೋಣ. ಸರ್ಕಾರ ನಿಗಧಿ ಮಾಡಿದ ಕಾರ್ಯಕ್ರಮದ ದಿನಾಂಕವನ್ನು ಬದಲಾವಣೆ ಮಾಡಿ, ಒಂದು ಪ್ರೊಟೊಕಾಲ್ ಇಲ್ಲ, ಒಂದು ಶಿಷ್ಟಾಚಾರವಿಲ್ಲವೆಂಬುದು ದಯವಿಟ್ಟು ಸರಿಯಿಲ್ಲ. ದಯವಿಟ್ಟು ಇದನ್ನು ಕೂಡಲೇ ನಿಲ್ಲಿಸಿ, ಇಡೀ ಸರ್ಕಾರ, ಇಡೀ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಎಲ್ಲಾ ಪಕ್ಷಗಳು ಸದಸ್ಯರುಗಳು ಒಳಗೊಂಡಂತೆ ಇರುವ ವಿಧಾನ ಸೌಧ ಎಂಬುದು ಇಡೀ ರಾಜ್ಯದ ಜನತೆಗೆ ಸಂದೇಶ ಹೋಗುವಂತೆ ಮಾಡಬೇಕು. ಆ ರೀತಿ ಮಾಡಬೇಕೆಂದು ನಾನು ತಮ್ಮ ಮೂಲಕ ಈ ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ, ದಯವಿಟ್ಟು ತಾವು ನಾಳೆಯ ಕಾರ್ಯಕ್ರಮವನ್ನು ರದ್ದುಮಾಡಿಸಬೇಕು.

ಶ್ರೀ ನೆ.ಲ. ನರೇಂದ್ರ ಬಾಬು :- ಮಾನ್ಯ ಸಭಾಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು :- ಯಾವುದಕ್ಕಾಗಿ ಪಾಯಿಂಟ್ ಆಫ್ ಆರ್ಡರ್? ನಾನು ಈ ವಿಷಯವನ್ನು ಕ್ಲೋಸ್ ಮಾಡಿದ್ದೇನೆ. ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ.

ಶ್ರೀ ನೆ.ಲ. ನರೇಂದ್ರ ಬಾಬು :- ಯಾವುದಕ್ಕಾಗಿ ಪಾಯಿಂಟ್ ಆಫ್ ಆರ್ಡರ್ ಎಂಬುದನ್ನು ನಾನು ಹೇಳುತ್ತೇನೆ, ದಯವಿಟ್ಟು ಅಲೊ ಮಾಡಿ ಈ ಸದನವನ್ನು ದಿಕ್ಕು ತಪ್ಪಿಸುವಂಥ ಹೇಳಿಕೆಗಳನ್ನು ಕೊಡುತ್ತಿದ್ದಾರೆ, ನನಗೆ ಆಹ್ವಾನ

ಪತ್ರಿಕೆಯನ್ನು ಕೊಟ್ಟಿದ್ದೀರಿ, ಸದಸ್ಯರ ಹಕ್ಕುಚ್ಯುತಿಯಾಗುತ್ತದೆ. ಮದುವೆಯಾದ ಮೇಲೆ ಸೋಬಾನವೋ, ಸೋಬಾನವಾದ ಮೇಲೆ ಮದುವೆಯೊ, ಬಿಜೆಪಿಯ ಇದ್ಯಾವ ಸಂಸ್ಕೃತಿ?

ಅಧ್ಯಕ್ಷರು :- ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ, ಹಕ್ಕುಚ್ಯುತಿಯಾಗಿದ್ದರೆ, ಬೇರೆ ಸ್ವರೂಪದಲ್ಲಿ ನೋಟಿಸ್ ಅನ್ನು ಕೊಡಿ.

ಆ) ವಿಷಯ :- ದಿನಾಂಕ 10-02-2009 ರಂದು ಕೆಂಗಲ್ ಹನುಮಂತಯ್ಯನವರ ನೂರನೇ ವರ್ಷ ಸಮಾರಂಭ ಆಚರಿಸಲು ಸರ್ಕಾರ ಕಾರ್ಯಕ್ರಮ ರೂಪಿಸುವ ಬಗ್ಗೆ.

ಶ್ರೀ ಡಿ.ಕೆ. ಶಿವಕುಮಾರ್ :- ಮಾನ್ಯ ಸಭಾಧ್ಯಕ್ಷರೆ, ಶೂನ್ಯವೇಳೆಯಲ್ಲಿ ಒಂದೇ ಒಂದು ವಿಷಯವನ್ನು ನಾನೊಬ್ಬನೆ ಪ್ರಸ್ತಾಪ ಮಾಡುತ್ತೇನೆ, ಬೇರೆ ಯಾರು ಚರ್ಚೆ ಮಾಡುವುದಿಲ್ಲ. ಬೆಂಗಳೂರಿನಲ್ಲಿರುವ ವಿಧಾನ ಸೌಧವನ್ನು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಂಥ ದಿ:ಕೆಂಗಲ್ ಹನುಮಂತಯ್ಯ ಅವರು ಕಟ್ಟಿಸಿದರು, ಅವರು ಆ ಸ್ಥಾನದಲ್ಲಿ ಕುಳಿತುಕೊಳ್ಳಲಾಗಲಿಲ್ಲ. ನಾವು ಸರ್ಕಾರದಲ್ಲಿ ಅನೇಕ ಸಂದರ್ಭದಲ್ಲಿ ಅನೇಕ ಜನ ಶಾಸಕರು, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲೇ ಎಲ್ಲಾ ಗೌರವವನ್ನು ಕೊಟ್ಟಿದ್ದೇವೆ, ಅವರ ಸ್ಟಾಚ್ಯು ಇಟ್ಟಿದ್ದೇವೆ, ಅವರ ಫೋಟೊವನ್ನು ಹಾಕಿದ್ದೇವೆ. ಆದರೆ ಈ ಫೆಬ್ರವರಿ 10ನೇ ತಾರೀಖಿಗೆ ಅವರು ಹುಟ್ಟಿ ನೂರನೇ ವರ್ಷವಾಗುತ್ತದೆ. ಹಿಂದೆ ಕುಮಾರ ಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಂತ ಸಂದರ್ಭದಲ್ಲಿ, ಇದಕ್ಕೆ ಬಜೆಟ್ ನಲ್ಲಿ ಒಂದು ಪ್ರಾವಿಷನ್ ಮಾಡಿ ಹಣವನ್ನಿಟ್ಟು ಏನಾದರು ಒಳ್ಳೆಯ ಕಾರ್ಯಕ್ರಮವನ್ನು ಹಾಕಿಕೊಂಡು ಇದನ್ನು ಆಚರಣೆ ಮಾಡಬೇಕೆಂದಿದ್ದರು. ಆದರೆ ಇವತ್ತಿನವರೆವಿಗೂ ಸರ್ಕಾರ ಬದಲಾವಣೆಯಾಗಿರಬಹುದು, ಯಾವುದೆ ಒಂದು ನಿಗಧಿಯಾದ ಕಾರ್ಯಕವನ್ನು ನಿರೂಪಿಸಿಲ್ಲ. ಇದ್ದಂಥ ಹಣದಲ್ಲಿ ಯಾವುದೋ ವಿಚಾರಕ್ಕೆ ಪ್ರಚಾರಕ್ಕೆ ಆ ಇಲಾಖೆಯಲ್ಲಿ ಹಣವನ್ನ ಉಪಯೋಗಿಸಿಕೊಂಡಿದ್ದಾರೆ. ಫೆಬ್ರವರಿ 10ನೇ ತಾರೀಖು ಬರುತ್ತಿದೆ, ಬೆಂಗಳೂರಿನಲ್ಲಿರುವ ಶಾಸಕರು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೊ, ಕರ್ನಾಟಕ ಸರ್ಕಾರ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆಯೊ, ತಾವು ಈ ಸದನದ ಅಧ್ಯಕ್ಷರಾಗಿದ್ದೀರಿ, ತಾವು ಈ ಜವಾಬ್ದಾರಿಯನ್ನು ತೆಗೆದುಕೊಂಡು ಈ ಸರ್ಕಾರದ ಕಾರ್ಯಕ್ರಮವನ್ನು ರೂಪಿಸಬೇಕು. ಯವ್ಯಾವುದಕ್ಕೊ ಕೋಟ್ಯಂತರ, ಲಕ್ಷಾಂತರ ಹಣವನ್ನು ಬಿಡುಗಡೆ ಮಾಡುತ್ತೀರಿ. ಒಂದು 5 ಕೋಟಿ ರೂಪಾಯಿಗಳನ್ನು ಈ